**ದಿನಾಂಕಃ 14.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃ ಡಿಕ್ರಿದಾರರ ಪರ ವಕೀಲರಿಂದಃ</u>**

ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ವಕೀಲರು ತಯಾರಿಸಿದ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಮೂಲ ದಾವೆ ಸಂ.6052/2021 ರ ದಾವೆ ನಡೆದಿದ್ದ ವಿಚಾರ ನನಗೆ ಗೊತ್ತು. ಸದರಿ ದಾವೆಯಲ್ಲಿ ತೀರ್ಪು ಆದ ನಂತರ ವಾದಿಗೆ ದಾವಾ ಸ್ವತ್ತಿನ ಬಾಬ್ತು ಬಾಡಿಗೆ ಪಾವತಿಸಿದ್ದೀರಾ ಎಂದರೆ ಸಾಕ್ಷಿ ನುಡಿಯುತ್ತಾರೆ 25 ಸಾವಿರ ರೂ.ಗಳನ್ನು ಪಾವತಿಸಿದ್ದೆನು. ಅದನ್ನು ಹೊರತುಪಡಿಸಿ ನಾನು ಡಿಕ್ರಿದಾರರಿಗೆ ಬಾಡಿಗೆಯ ಬಾಬ್ತು ಯಾವುದೇ ಹಣವನ್ನು ಪಾವತಿಸಿಲ್ಲ. ಈ ಅಮಲ್ಜಾರಿ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದಂತೆ ನನ್ನನ್ನು ದಾವಾ ಸ್ವತ್ತಿನಿಂದ ಖಾಲಿ ಮಾಡಿಸಿರುತ್ತಾರೆ ಎಂದರೆ ಸರಿ. ಸೆಪ್ಟೆಂಬರ್ 2022 ರಲ್ಲಿ ಆ ರೀತಿ ಖಾಲಿ ಮಾಡಿಸಿರುತ್ತಾರೆ ಎಂದರೆ ಸರಿ. ಅರ್ಜಿದಾರರ ಬಳಿ ನನ್ನ ಮುಂಗಡ ಹಣ 2 ಲಕ್ಷ ರೂ. ಇರುವುದು ನಿಜ ಎಂದರೆ ಸರಿ. ನ್ಯಾಯಾಲಯದಿಂದ ಮುಟ್ಟುಗೋಲು ಹಾಕಿಕೊಳ್ಳಲು ಬಂದಾಗ ನಾನು 25 ಸಾವಿರ ರೂ. ಹಣವನ್ನು ಡಿಕ್ರಿದಾರರಿಗೆ ನೀಡಿರುವುದು ನಿಜ ಎಂದರೆ ಸರಿ. ಮೂಲ ದಾವೆ ಸಂ.6052/2021 ರಲ್ಲಿ ನಾನು ಡಿಕ್ರಿದಾರರಿಗೆ 1 ಲಕ್ಷದ 50 ಸಾವಿರ ರೂ. ಹಣವನ್ನು ಪಾವತಿಬೇಕು ಎಂದು ಆದೇಶವಾಗಿದೆ ಎಂದರೆ ಸಾಕ್ಷಿ ನುಡಿಯುತ್ತಾರೆ ಅದು ಸುಳ್ಳು ನಾನು ಅದನ್ನು ಒಪ್ಪುವುದಿಲ್ಲ. ದಿನಾಂಕ 01.11.2021 ರಿಂದ 27.09.2022

ರವರೆಗೆ ನಾನು ವಾದಿಗೆ ಬಾಡಿಗೆ ಹಣವನ್ನು ಪಾವತಿಸಲು ಬಾಕಿ ಇರುತ್ತದೆ ಎಂದರೆ ಸರಿಯಲ್ಲ. ದಿನಾಂಕ 21.06.2025 ರ ದಿನಕ್ಕೆ ನಾನು ಅರ್ಜಿದಾರರಿಗೆ 1,94,645/- ರೂ.ಹಣವನ್ನು ಪಾವತಿಸಲು ಬಾಧ್ಯಳು ಎಂದರೆ ಸರಿಯಲ್ಲ. ನನ್ನ ಪ್ರಕಾರ ಯಾವ ತಿಂಗಳಿನಿಂದ ಯಾವ ತಿಂಗಳವರೆಗೆ ನಾನು ಬಾಡಿಗೆ ಹಣ ಪಾವತಿಸಲು ಬಾಧ್ಯಳು ಎಂದರೆ ನನಗೆ ನೆನಪಿಲ್ಲ. ನನ್ನ ಮತ್ತು ಅರ್ಜಿದಾರರ ಮಧ್ಯೆ ವ್ಯಾಜ್ಯ ಇದ್ದ ಕಾರಣ ನಾನು ಬಾಡಿಗೆ ಹಣವನ್ನು ಆನ್‌ಲೈನ್ ಮೂಲಕ ಪಾವತಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿ ನುಡಿಯುತ್ತಾರೆ ಇಲ್ಲ, ಮೊದಲೇ ಪಾವತಿಸಿದ್ದೆನು, ಅದಕ್ಕೆ ರಶೀದಿ ಕೊಟ್ಟಿರಲಿಲ್ಲ. ನಾನು ಅರ್ಜಿದಾರರಿಗೆ ಹಣ ನೀಡುವುದರಿಂದ ತಪ್ಪಿಸಿಕೊಳ್ಳಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.